ಯಮುನಕ್ಕನಿಗೆ ಇಷ್ಟವೇ. ಆದರೆ ಆಗ ಬೊಮ್ಮಿ ಪದ್ಮಳ ಮನೆಯಲ್ಲಿ ಇರುತ್ತಾಳೆ. ಏನಾದರೂ ಬಿಟ್ಟಿ ಕೆಲಸ ಮಾಡುತ್ತಾ, ಊರಿನವರ ಬಗ್ಗೆ ಅಂತೆಕಂತೆಗಳನ್ನು ವರದಿ ಒಪ್ಪಿಸುತ್ತಾ, ಟೀವಿ ನೋಡುತ್ತಾ ಇರುತ್ತಾಳೆ. ಪದ್ಮಳಿಗೆ ಟೀವಿ ಕಾರ್ಯಕ್ರಮಗಳಿಗಿಂತಲೂ ಬೊಮ್ಮಿಯ ಪಟ್ಟಾಂಗಗಳೇ ಇಷ್ಟವೆನಿಸುತ್ತದೆ.

ಯಮುನಕ್ಕನಿಗೆ ದಿನ ಕಳೆಯುವುದು ಹೇಗೆಂದು ಗೊತ್ತಾಗುವುದಿಲ್ಲ. ಸಾಧ್ಯವಾದಷ್ಟು ಹೊತ್ತು ಹತ್ತಿಯ ರಾಶಿ ಜತೆಗಿಟ್ಟುಕೊಂಡು ಬತ್ತಿಗಳನ್ನು ತಯಾರಿಸುತ್ತಾ ಇರುತ್ತಾಳೆ. ಎಲ್ಲಿಯಾದರೂ ಊಟದ ಹೇಳಿಕೆ ಇದ್ದರೆ ಎಷ್ಟು ಕಷ್ಟವಾದರೂ ನಡೆದುಕೊಂಡೇ ಹೋಗಿ ಎರಡು ಮುಷ್ಟಿ ಉಂಡು ಬರುತ್ತಾಳೆ. ಅಷ್ಟಾದರೂ ನಡೆಯದಿದ್ದರೆ ಕೈಕಾಲು ಬಿದ್ದುಹೋಗುತ್ತದೆ. ತಿಂಗಳ ಮೊದಲನೆಯ ವಾರ ವಿಧವೆಯರ ಮಾಸಾಶನ ಬರುವುದೋ ಎಂದು ನೋಡಲು ಪೋಸ್ಟ್ ಆಫೀಸಿಗೆ ನಡೆದುಕೊಂಡು ಹೋಗುತ್ತಾಳೆ. ಅವಳು ಹೋದಾಗ ಅದು ಬಂದಿರುವುದಿಲ್ಲ. ಮತ್ತೊಂದು ದಿನ ಪೋಸ್ಟ್‌ಮ್ಯಾನ್ ಅವಳ ಮನೆಯವರೆಗೆ ಸೈಕಲ್ಲಿನಲ್ಲಿ ಬಂದು ಮಾಸಾಶನದ ಮನಿಯಾರ್ಡರ್ ಕೊಟ್ಟುಹೋಗುತ್ತಾನೆ. ಯಮುನಕ್ಕನ ಅಣ್ಣನ ಮಕ್ಕಳು ಕೂಡಾ ಆಗಾಗ ಸ್ವಲ್ಪ ಹಣ ಕಳುಹಿಸುತ್ತಾರೆ. ಯಮುನಕ್ಕನ ನಂತರ ಆ ಮನೆ ಅವಳ ಅಣ್ಣನ ಮಕ್ಕಳಿಗೇ ಮುಂದೆ ಸೇರಬೇಕಾದುದು. ಈಗ ಬೆಂಗಳೂರಿನಲ್ಲಿ ಹೋಟೆಲ್ ಕೆಲಸದಲ್ಲಿರುವ ಅವರು ಯಮುನಕ್ಕನಿಗೆ ಹಣ ಕಳುಹಿಸಲು ಕಾರಣ, ಯಮುನಕ್ಕ ತಮ್ಮ ಸೋದರತ್ತೆ ಎಂಬ ಬಾಧ್ಯತೆ ಒಂದು ಕಡೆ, ಮನೆಯನ್ನು ಗೆದ್ದಲು ಹಿಡಿದು ಹಾಳಾಗದ ಹಾಗೆ ಕಾಪಾಡುತ್ತಿದ್ದಾಳಲ್ಲ ಎಂಬ ಕೃತಜ್ಞತೆ ಇನ್ನೊಂದು ಕಡೆ. ಆದರೆ ಅವರು ಯಾವತ್ತೂ ಯಮುನಕ್ಕ ಕೊನೆಗಾಲದಲ್ಲಾದರೂ ತಮ್ಮ ಜತೆಗೆ ಬೆಂಗಳೂರಿಗೆ ಬಂದು ನೆಮ್ಮದಿಯಾಗಿ ಬದುಕಲಿ ಎಂದು ಯೋಚಿಸಿದವರಲ್ಲ.

ಯಮುನಕ್ಕ, ಬೊಮ್ಮಿ ಮತ್ತು ಪದ್ಮ ಈ ಮೂವರ ಮನೆಯೂ ಪರಸ್ಪರ ನೂರಡಿ ದೂರದಲ್ಲಿ ತ್ರಿಕೋನದ ಮೂರು ಕೋನಗಳಲ್ಲಿರುವಂತೆ ಇವೆ. ಬೊಮ್ಮಿಯ ಗುಡಿಸಲು ತ್ರಿಕೋನದ ಶಿಖರದಲ್ಲಿ, ದಕ್ಷಿಣ ದಿಕ್ಕಿನಲ್ಲಿ ಇರುವುದರಿಂದ ಅವಳು ತನ್ನ ಗುಡಿಸಲಿನ ವಾಯವ್ಯಕ್ಕೆ ಇರುವ ಪದ್ಮಕ್ಕನ ಮನೆಯ ಮೇಲೂ, ಈಶಾನ್ಯಕ್ಕೆ ಇರುವ ಯಮುನಕ್ಕನ ಇವರಿಬ್ಬರ ಮನೆಯ ಮೇಲೂ ಸುಲಭವಾಗಿ ಕಣ್ಣಿಡಬಲ್ಲಳು. ಅವರ ಮನೆಗಳ ಬಾಗಿಲುಗಳು ಉತ್ತರಕ್ಕೆ ಮುಖವಾಗಿರುವುದರಿಂದ ಅವರಿಬ್ಬರು ತಮ್ಮ ಮನೆಯ ಬೆನ್ನ ಹಿಂದೆ ಇರುವ ಬೊಮ್ಮಿಯ ಚಟುವಟಿಕೆಗಳ ಮೇಲೆ ಕಣ್ಣಿಡುವುದು ಸುಲಭವಲ್ಲ.

ಈಗ ಮುದುಕಿಯರಾಗಿರುವ ಬೊಮ್ಮಿ ಮತ್ತು ಯಮುನಕ್ಕ ತಮ್ಮ ತಮ್ಮ ಮನೆಗಳಲ್ಲಿ ಒಂಟಿಜೀವಗಳು. ಮಧ್ಯ ವಯಸ್ಕ ಹೆಂಗಸು ಪದ್ಮಳ ಗಂಡ ಅನಂತಪದ್ಮನಾಭ ರಾಯರು ಪ್ರತಿನಿತ್ಯ ಬೆಳಿಗ್ಗೆ ಎಂಟು ಗಂಟೆಗೆ ಮಂಚಕಲ್ಲಿನಲ್ಲಿರುವ ತಮ್ಮ ಫ್ಯಾನ್ಸಿ ಸ್ಟೋರನ್ನು ತೆರೆಯಲು ಹೊರಟು, ರಾತ್ರಿ ಎಂಟು ಗಂಟೆಗೆಲ್ಲ ಬಂದುಬಿಡುತ್ತಾರೆ. ಅವರಿಗೆ ಮಧ್ಯಾಹ್ನದ ಊಟ ಹೋಟೆಲ್ ಮಹಾದೇವಿ ಭವನದಲ್ಲಿ. ಇಡೀ ದಿವಸ ಈ ಮೂರು ಮನೆಗಳಲ್ಲಿ ಮೂವರು ಹೆಂಗಸರು ಮಾತ್ರ ಇರುತ್ತಾರೆ, ಅವರವರದೇ ಜಗತ್ತಿನಲ್ಲಿ. ಆಗಾಗ ಬೊಮ್ಮಿ ಎಂಬ ದೇಶ ಯಮುನಕ್ಕ ಎಂಬ ದೇಶದ ಮೇಲೆ ದಂಡೆತ್ತಿ ಹೋಗಿ ಯುದ್ಧ ಸಾರುತ್ತದೆ. ಸಂಧಾನ ಮಾಡಬೇಕಾದ ತಟಸ್ಥ ದೇಶವಾಗಿದ್ದ ಪದ್ಮಕ್ಕ ಈ ಯುದ್ಧದಿಂದ ಖರ್ಚಿಲ್ಲದೆ ಮನರಂಜನೆ ಪಡೆಯುತ್ತದೆ.

★★★

ಬೊಮ್ಮಿ ಅರ್ಧ ಶತಮಾನ ಹಿಂದಿನ ತನ್ನ ವಿವಾಹಪೂರ್ವ ಪ್ರೇಮಸಂಬಂಧವೊಂದನ್ನು